# Colonial Administration : Indians

Sponsored by :
Department Of Archives, Govt. of Karnataka

Editor
Prof. S. R. Nagannavar



ORGANIZED BY DEPARTMENT OF HISTORY
V.M.K.S.R. Vastrad Arts, Science &
V. S. Bellihal Commerce, College, Hungund

Scanned with OKEN Scanner

# TITAL: COLONIAL ADMINISTRATION: INDIANS

(Research Articles Presented In The National Seminar Held At V.M.K.S.R. Vastrad Arts, Science and V.S.Bellihal Commerce College, Hungund)

**Chief Editor:** **Prof. (Smt) S.K.Math. Principal**
V.M.K.S.R.Vastrad Arts, Science and
V.S.Bellihal Commerce College, Hungund

**Editor** : Prof.S.R.Nagannavar
Assistant Professor
Department of History
V.M.K.S.R.Vastrad Arts, Science and
V.S.Bellihal Commerce College, Hungund

**Published by:** V.M.V.V.Sangha
V.M.K.S.R.Vastrad Arts, Science and
V.S.Bellihal Commerce College, Hungund.

Publisher : Manasollas Prakashan
Near Siddaganga School
Hungund-587118

Year of Publication : 2020

Price : Rs.200/-

Copies : 500

THE PUBLICATION OF THIS VOLUME HAS BEEN FINANCIALLY SUPPORTED BY THE KARNATAKA STATE ARCHIVES DEPARTMENT, BANGALORE. THE RESPONSIBILITY FOR THE FACTS STATED OR OPINIONS EXPRESSED IS ENTIRELY OF THE AUTHORS AND NOT OF THE KARNATAKA STATE ARCHIVES DEPARTMENT OR THE V.M.K.S.R. VASTRAD ARTS, SCIENCE AND V.S.BELLIHAL COMMERCE COLLEGE, HUNGUND

ISBN 978-93-5396-971-4

Scanned with OKEN Scanner

## ಬಾಗಲಕೋಟ ಜಿಲ್ಲೆಯ ಬ್ರಿಟಿಷ್ ಕಾಲದ ಸಮಾಜಮುಖಿ ಕಾರ್ಯಗಳು

**ಎಸ್.ಆರ್.ನಾಗಣ್ಣವರ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ.
ವಿ.ಎಂ.ಕೆ.ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ
ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ

ಕ್ರಿ.ಶ.೧೬೦೦ರಲ್ಲಿ ಬ್ರಿಟಿಷ್ ಈಷ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸುವುದರೊಂದಿಗೆ ಭಾರತವನ್ನು ತಮ್ಮ ವಸಾಹತು ಕೇಂದ್ರವನ್ನಾಗಿಸಿಕೊಂಡು ವ್ಯಾಪಾರವನ್ನು ನಡೆಸುತ್ತಾ ಕಾಲಕ್ರಮೇಣ ದೇಶೀಯ ದೊರೆಗಳ ಅಬಲತೆಯ ಲಾಭವನ್ನು ಪಡೆದುಕೊಂಡು ಅರಸರುಗಳನ್ನು ರಾಜಕೀಯ ರಂಗದಿಂದ ದೂರಸರಿಸಿ ತಮ್ಮದೇ ಪ್ರಭುತ್ವವನ್ನು ಸ್ಥಾಪಿಸಿಕೊಂಡರು. ಇವರು ತಮ್ಮ ಕೈಗೆಳಗೆ ಸ್ಥಳೀಯ ಸಂಸ್ಥಾನಿಕರ ಮೂಲಕ ಆಡಳಿತವನ್ನು ನಿಯಂತ್ರಿಸುತ್ತಾ ರಾಜಕೀಯವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಬೆಳೆಯುತ್ತ ಸಾಗಿದರು. ಅಲ್ಲದೆ ತಮ್ಮ ಹೊಸ ವಿಚಾರಗಳ ಸಂಪರ್ಕದಿಂದ ಭಾರತದ ಸಾಂಸ್ಕೃತಿಕ ಕ್ಷೇತ್ರವೂ ಬದಲಾವಣೆ ಹೊಂದಿತು. ಬ್ರಿಟಿಷರ ಹೊಸ ಹೊಸ ವಿಚಾಧಾರೆ ಮತ್ತು ಇಂಗ್ಲೀಷ್ ಶಿಕ್ಷಣದ ಪ್ರಭಾವದಿಂದ ಭಾರತೀಯ ಸಂವೇದನೆಯಲ್ಲಿ ಹೊಸ ಚೈತನ್ಯ ಉಂಟಾಯಿತು. ಇದರೊಂದಿಗೆ ನಾಡಿನಾದ್ಯಂತ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ವಲಯದಲ್ಲಿ ಸುಧಾರಣಾವಾದಿ ಚಳುವಳಿಗಳು ಆರಂಭವಾದವು. ಅಂತಹ ಕೆಲವೊಂದು ಸುಧಾರಣೆಗಳನ್ನು ಅವರ ಕಾಲದಲ್ಲಿ ಬರೆಯಿಸಲಾದ ಶಾಸನಗಳಿಂದ ತಿಳಿಯಬಹುದಾಗಿದೆ. ಈ ಶಾಸನಗಳು ಮತ್ತು ಸಾಹಿತ್ತಿಕ ಆಧಾರಗಳ ಹಿನ್ನೆಲೆಯಲ್ಲಿ ವಸಾಹತುಶಾಹಿ ಬ್ರಿಟಿಷರ ಕಾಲದಲ್ಲಾದ ಸಮಾಜಮುಖಿ ಚಟುವಟಿಕೆಗಳನ್ನು ಪರಿಚಯಿಸುತ್ತವೆ.

**ಶಾಸನಗಳ ಹಿನ್ನೆಲೆಯಲ್ಲಿ ಸಮಾಜಮುಖಿ ಕಾರ್ಯಗಳು :**

ಬಾಗಲಕೋಟೆ ಜಿಲ್ಲೆಯಲ್ಲಿ ವಸಾಹತುಶಾಹಿ ಬ್ರಿಟಿಷರ ಕಾಲದಲ್ಲಿ ಬರೆಯಿಸಲಾದ ಒಟ್ಟು ೩೪ ಶಾಸನಗಳು ಈವರಗೆ ಲಭ್ಯವಾಗಿದ್ದು ಸಾಮಾನ್ಯವಾಗಿ ಅವುಗಳು ಮರಾಠಿ ಮತ್ತು ಕನ್ನಡ ಭಾಷೆ ಮತ್ತು ಲಿಪಿಗಳಲ್ಲಿವೆ. ಈ ೩೪ ಶಾಸನಗಳಲ್ಲಿ ಬಾಗಲಕೋಟೆ ತಾಲೂಕಿನಲ್ಲಿ ೨೧, ಬೀಳಗಿ ತಾಲೂಕಿನಲ್ಲಿ ೦೬, ಜಮಖಂಡಿ ತಾಲೂಕಿನಲ್ಲಿ ೦೩, ಬಾದಾಮಿ ತಾಲೂಕಿನಲ್ಲಿ ೦೨ ಮತ್ತು ಹುನಗುಂದ ತಾಲೂಕಿನಲ್ಲಿ ೦೪೧೬ ಶಾಸನಗಳು ಲಭ್ಯವಾಗಿವೆ. ಬಾಗಲಕೋಟೆ ತಾಲೂಕಿನ ಕಲಾದಗಿಯಲ್ಲಿಯೇ ೧೭ ಶಾಸನಗಳು ದೊರೆತಿದ್ದು ಅವುಗಳಲ್ಲಿ ೧೬ ಶಾಸನಗಳು ಸಮಾಧಿಶಾಸನಗಳಾಗಿವೆ. ಈ ಶಾಸನಗಳು ಅವರ ವೀರಗಲ್ಲು ಶಾಸನಗಳಾಗಿರದೇ ಅಥವಾ ಯಾವುದೋ ಹೋರಾಟ ಮಾಡುವ ಸಂದರ್ಭದಲ್ಲಿ ಮೃತರಾಗಿದ್ದ ಕುರಿತಾಗಿ ತಿಳಿಸದೇ ಯಾವುದೇ ಅನಾರೋಗ್ಯದಿಂದ ಮೃತರಾದ ಮಾಹಿತಿಯನ್ನು ನೀಡುವ ಶಾಸನಗಳಾಗಿವೆ. ಉಳಿದಂತೆ ದೇವಾಲಯ, ಅಗಸಿಬಾಗಿಲು, ಚರ್ಚ, ಬಾವಿಗಳ ನಿರ್ಮಾಣ ಮುಂತಾದ ಸಮಾಜಮುಖಿ ಕಾರ್ಯಗಳೊಂದಿಗೆ ದಾನ ನೀಡಿದ ವಿವರಗಳನ್ನು ಪರಿಚಯಿಸುವ ಶಾಸನಗಳು ಕಂಡುಬರುತ್ತವೆ. ಅವುಗಳ ಕುರಿತಾದ ವಿಷಯವನ್ನು ಈ ಲೇಖನದ ಮೂಲಕ ತಮಗೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ವಸಾಹತುಶಾಹಿ ಬ್ರಿಟಿಷ ಕಾಲದಲ್ಲಿ ಸ್ವತಃ ಬ್ರಿಟಿಷ್ ಅಧಿಕಾರಿಗಳೇ ತಮ್ಮ ಸಾಮ್ರಾಟರ ಪಟ್ಟಾಭಿಷೇಕ ಸಮಾರಂಭ ಅಥವಾ ಹುಟ್ಟುಹಬ್ಬದ ನೆನಪಿನ ಹಿನ್ನೆಲೆಯಲ್ಲಿ



ISBN 978-93-5396-971-4

ದೇವಾಲಯಗಳನ್ನು ಚರ್ಚುಗಳನ್ನು ನಿರ್ಮಿಸಿ ಕುರಿತಾಗಿ ಶಾಸನಗಳನ್ನು ಮತ್ತು ಫಲಕಗಳನ್ನು ಬರೆಯಿಸಿದ್ದಾರೆ. ಹುನಗುಂದ ತಾಲೂಕಿನ ರಾಮವಾಡಗಿ ರಸ್ತೆಯಲ್ಲಿರುವ ಹನುಮಾನ ದೇವಾಲಯದ ಗರ್ಭಗುಡಿಯ ಪಟ್ಟಿಕೆಯ ಮೇಲೆ ಬ್ರಿಟಿಷ ಅರಸನಾದ ಒಂದನೆಯ ಜಾರ್ಜನ ಪಟ್ಟಾಭಿಷೇಕದ ಸ್ಮರಣೆಗಾಗಿ ಈ ದೇವಾಲಯವನ್ನು ನಿರ್ಮಿಸಲಾಗಿದೆ ಎಂಬ ಉಲ್ಲೇಖವಿದೆ. ಬ್ರಿಟಿಷರು ಕ್ರೈಸ್ತಿಯನ್ನರಾಗಿದ್ದರೂ ಸಹ ಕರ್ನಾಟಕದಲ್ಲಿ ಧರ್ಮಸಮನ್ವತೆಯ ತತ್ವವನ್ನು ಅಳವಡಿಸಿಕೊಂಡಿದ್ದರೆಂಬುದು ತಿಳಿಯುತ್ತದೆ. ಕಲಾದಗಿ ಜಿಲ್ಲಾ ಕೇಂದ್ರವಾಗಿದ್ದಾಗ ರಾಮವಾಡಗಿ ಗ್ರಾಮವು ತಾಲೂಕಾ ಕೇಂದ್ರವಾಗಿತ್ತು ಎಂಬುದಕ್ಕೆ ಹಲವಾರು ಪುರಾವೆಗಳು ಲಭ್ಯವಾಗಿವೆ.[೧] ಕಲಾದಗಿಯ ಅಗಸಿ ಸಮೀಪದಲ್ಲಿರುವ ಮರಾಠಿ ಭಾಷೆಯಲ್ಲಿರುವ ಶಾಸನವೊಂದರಲ್ಲಿ ಶಕ ೧೭೭೨ ರ ಸಾಧಾರಣ ಸಂವತ್ಸರದ ಸಂದರ್ಭದಲ್ಲಿ ಅಂದರೆ ಕ್ರಿ.ಶ.೧೮೫೦ರ ಕಾಲಕ್ಕೆ ಸರಿಹೊಂದುವ ಶಾಸನವು ಕಂಪನಿ ಸರ್ಕಾರದ ಮಾಮಲೇದಾರ ಶ್ರೀಪತ ವಿಠಲನ ಬಾಗಲಕೋಟೆಯ ಟಂಕಶಾಲೆಯ ಕಾರಕೂನನಾದ ಕೃಷ್ಣಾಜಿ ತಮ್ಮಾಜಿ ಎಂಬಾತನು ತಮ್ಮ ನಗರದ ರಕ್ಷಣೆಯ ದೃಷ್ಟಿಯಿಂದ ಅಗಸಿಯನ್ನು ಕಟ್ಟಿಸಿದನೆಂದು ಹೇಳುತ್ತದೆ.[೨]

ಹವೇಲಿ ಗ್ರಾಮದ ಮಾರುತಿ ದೇವಾಲಯದ ಎದುರಿನಲ್ಲಿ ನಿಲ್ಲಿಸಿರುವ ಕ್ರಿ.ಶ.೧೮೨೨ರ ಶಾಸನದಲ್ಲಿ[೩] ಕುಂ[ಕಂ]ಪಣಿ ಸರ್ಕಾರದಲ್ಲಿ ಬಾಗಡಿಕೋಟೆಯ ಸುಬೇದಾರನಾಗಿದ್ದ ಅಪ್ಪೂರಾಯನು ಬಹಳ ವರ್ಷಗಳಿಂದ ಹಾಳು ಬಿದ್ದಿರುವ ಹವೇಲಿ ಎಂಬ ಗ್ರಾಮವನ್ನು ಜೀರ್ಣೋದ್ಧಾರವಾಗಿಸಿ, ಗ್ರಾಮವನ್ನು ಗೋಪಾಲಪುರವೆಂದು ಪುನರ್‌ನಾಮಕರಣ ಮಾಡಿದನೆಂದು ಹಾಗೂ ಅಲ್ಲಿಯೇ ಹನುಮಂತ ಮತ್ತು ಈಶ್ವರ ದೇವಾಲಯವನ್ನು ನಿರ್ಮಿಸಿದನೆಂದು ತಿಳಿಸುತ್ತಾ ಮತ್ತು ದೇವಾಲಯದ ಪೂಜಾ ಕಾರ್ಯಗಳಿಗೆ ಅವಶ್ಯವಾಗಿರುವ ನೀರಿನ ಬಾವಿ ಮತ್ತು ಮಾವು, ಆಲ, ನಿಂಬೆ ಮುಂತಾದ ಹಣ್ಣಿನ ಮರಗಳನ್ನು ನೆಡೆಸಿದನೆಂದು ದಾಖಲಿಸಿದೆ. ಈ ಶಾಸನದ ಮೂಲಕ ಹವೇಲಿ ವಸಾಹತುಶಾಹಿಗಳ ಕಾಲದಲ್ಲಿ ಗೋಪಾಲಪುರವೆಂದು ಕರೆಯಲ್ಪಟ್ಟಿರುವುದ ವಿಶೇಷವಾಗಿದೆ. ಈ ದೇವಾಲಯಗಳಲ್ಲಿ ಪ್ರತಿದಿನ ಪುರಾಣ ಪಠಣ ಮಾಡಲಾಗುತ್ತಿತ್ತು ಎಂತಲೂ ಶಾಸನವು ಹೇಳುತ್ತದೆ. ಅಲ್ಲದೇ ಅಪ್ಪೂರಾಯನು ಶಿವ ಮತ್ತು ವಿಷ್ಣುವಿನ ಪರಮಭಕ್ತನಾಗಿದ್ದನೆಂದು ತಿಳಿಯಬಹುದಾಗಿದೆ.

ಬೀಳಗಿಯ ಸಿದ್ದೇಶ್ವರ ದೇವಾಲಯದ ಮೆಟ್ಟಿಲುಗಳ ಮೇಲೆ ಬರೆಯಲಾಗಿದ್ದ ಕ್ರಿ.ಶ.೧೮೯೫ರ ಶಾಸನವು[೪] ನಾಗರಿಲಿಪಿಯಲ್ಲಿದ್ದು ಖಂಡೇರಾವ್ ತಿಮ್ಮಾಜಿ ಎಂಬಾತನು ದೇವಾಲಯದ ಪೂರ್ವದ್ವಾರವನ್ನು ನಿರ್ಮಿಸಿದ್ದನ್ನು ತಿಳಿಸುತ್ತದೆ. ಅದೇ ನಗರದ ಆರೆತ್ತಿನ ಬಾವಿಯ ಗೋಡೆಗೆ ಸೇರಿಸಿರುವ ಕಲ್ಲೊಂದರ ಮೇಲೆ ಬರೆಯಲಾಗಿರುವ ಕ್ರಿ.ಶ.೧೭೦೮ರ ಶಾಸನದಲ್ಲಿ ಶಕವರ್ಷ ೧೬೩೦, ಸರ್ವಧಾರಿ, ಮಾರ್ಗಶಿರ, ಸು.೧೦, ಗುರುವಾರ ಉತ್ತರ ಭಾದ್ರಪದ ನಕ್ಷತ್ರದಂದು ಗಾರ್ಗ್ಯಗೋತ್ರದ ವೀಸಾಜಿ ಮಹಾದೇವ ಪಂಡಿತನು ತಾನು ಕಷ್ಟದಿಂದ ದುಡಿದ ಸಂಪಾದಿಸಿದ ಹಣದಲ್ಲಿ ವಿಲಗಿಯ ಉತ್ತರದಲ್ಲಿ ತನ್ನ ತಂದೆ ಕೃಷ್ಣಾಜಿ ರಘುನಾಥನು ಪ್ರಾರಂಭಿಸಿದ ಬಾವಿ ತೋಡುವ ಕಾರ್ಯವನ್ನು ಪೂರ್ಣವಾಗಿಸಿದನೆಂದು ತಿಳಿಸುತ್ತದೆ. ಶಾಸನದ ಆರಂಭದಲ್ಲಿ ಶ್ರೀಲಕ್ಷ್ಮೀ ನರಸಿಂಹಾಯ ನಮಃ ಎಂದು ವಿಷ್ಣು ಪ್ರಾರ್ಥನೆಯನ್ನು ಒಳಗೊಂಡಿದೆ. ಇದೇ ಬಾವಿಯಲ್ಲಿರುವ ಮತ್ತೊಂದು ಶಾಸನವು ಮಹಾದೇವ ವಿಸಾಜಿಪಂತನು ಬಾವಿಯನ್ನು ತೋಡಿಸಿ, ತೋಟದ ವನ ನಿರ್ಮಿಸಿದನು ಇದಕ್ಕೆ ಅರಮನೆಯವರು ದತ್ತಿಯನ್ನು ಕೊಡಮಾಡಿದರೆಂದು



ISBN 978-93-5396-971-4

ದಾಖಲಿಸುತ್ತದೆ. ನಾಗರಾಳದ ಕ್ರಿ.ಶ.೧೮೪೧ರ ಶಾಸನವು[೫] ಸರಕಾರದ ಆದೇಶದಂತೆ ಗಿಡಗಳನ್ನು ನೆಡುವುದನ್ನು ದಾಖಲಿಸುತ್ತದೆ.

ಹೊನ್ನಿಹಾಳ ಗ್ರಾಮದ ಹನುಮಂತ ದೇವಾಲಯದ ಎದುರಿನಲ್ಲಿರುವ ಕಲ್ಲೊಂದರ ಮೇಲೆ ಬರೆಯಿಸಲಾದ ಶಾಸನವು[೬] ಶ್ರೀಮುಖ, ಮಾಘ, ಶು,೧, ೧೭ನೇ ಶತಮಾನಕ್ಕೆ ಸಂಬಂಧಿಸಿದುದಾಗಿದೆ. ಇದರಲ್ಲಿ ಯಾರೋ ಓರ್ವ ಅಧಿಕಾರಿಯು ಡೊಂಬರರಿಗೆ ದಾನ ನೀಡಿದ ಉಲ್ಲೇಖವನ್ನು ಹೊಂದಿದೆ.

ಜಮಖಂಡಿ ತಾಲೂಕಿನ ತೇರದಾಳದ ಬಸದಿಯಲ್ಲಿರುವ ನೇಮಿನಾಥ ಪ್ರತಿಮೆಯ ಪೀಠದ ಮೇಲೆ ಬರೆಯಿಸಲಾದ ೧೭೪೮ರ ಶಾಸನವು[೭] ತೇರದಾಳದ ದೇಸಾಯಿ ಸತ್ಯವ್ವ ಮತ್ತು ಆಕೆಯ ಮಗನಾದ ಜಕ್ಕಪ್ಪರು ಒಂದಾಗಿ ಗೊಂಕ ಜೀನಾಲಯದಲ್ಲಿ ಶಕವರ್ಷ ೧೬೭೦ರ ವಿಭವನಾಮ ಸಂವತ್ಸರದ ಮಾರ್ಗಶಿರದ ಶುಕ್ಲ ದಶಮಿ ಶುಕ್ರವಾರದಂದು ನೇಮಿನಾಥಸ್ವಾಮಿ ತೀರ್ಥಂಕರನ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದನ್ನು ಹೇಳುತ್ತದೆ. ಕಲ್ಲಹಳ್ಳಿಯ ವೆಂಕಟೇಶ್ವರ ದೇವಾಲಯದ ವರಹಾಮೂರ್ತಿ ದೇವಾಲಯದ ಬಲಗಡೆ ಗೋಡೆಯಲ್ಲಿರುವ ಕಲ್ಲಿನಲ್ಲಿ ಬರೆಯಿಸಲಾದ ಕ್ರಿ.ಶ.೧೮೮೯ ರ ಶಾಸನವು ಕಲ್ಲಹಳ್ಳಿಯ ಶೇಷ ಎಂಬಾತನು ಗ್ರಾಮದ ಬೆಟ್ಟದ ಮೇಲೆ ತಪಶುಕ್ಲ ದ್ವಾದಶದಂದು ಶಶಿವಾಸರೇ ಶುಭಲಗ್ನದಂದು ಶ್ರೀನಿವಾಸರ ದೃಢಭಕ್ತಿಯಿಂದ ವರಾಹಮೂರ್ತಿಯನ್ನು ಪ್ರತಿಷ್ಠಾಪಿಸಿದನೆಂದು ಉಲ್ಲೇಖಿಸುತ್ತದೆ. ಇದೇ ದೇವಾಲಯದ ಎಡಗಡೆಯ ಗೋಡೆಯಲ್ಲಿರುವ ಕಲ್ಲಿನಲ್ಲಿರುವ ಕ್ರಿ.ಶ.೧೮೦೮ರ ಶಾಸನದಲ್ಲಿ[೮] ಶೇಷರಾವ್ ಎಂಬಾತನು ವರಹಾದೇವಾಲಯವನ್ನು ನಿರ್ಮಿಸಿದನೆಂದು ದಾಖಲೆಯಿದೆ.

ಹುನಗುಂದ ತಾಲೂಕಿನ ಕೆಲೂರು ಗ್ರಾಮದ ಕ್ರಿ.ಶ.೧೮೨೪ರ ಶಾಸನವು[೯] ಕುಂಪಣಿ ಸರಕಾರವು ಕೆಲೂರಿನ ಮೇಲೆ ವಿಜಯ ಸಾಧಿಸಿದ ಕುರಿತಾದ ದಾಖಲೆಯನ್ನು ಒಳಗೊಂಡಿದೆ.

ಹುನಗುಂದ ತಾಲೂಕಿನ ರಾಮವಾಡಗಿ ಬ್ರಿಟಿಷ್ ಕಾಲದಲ್ಲಿ ತಾಲೂಕಾ ಕೇಂದ್ರವಾಗಿದ್ದು ಹಲವಾರು ಸ್ಮಾರಕಗಳು ಇದಕ್ಕೆ ಸಾಕ್ಷಿಯಾಗಿವೆ. ಸ್ಥಳೀಯ ಸರಕಾರಿ ಶಾಲೆಯ ಬಳಿಯಿರುವ ನೀರಿನ ಬಾವಿಯೊಂದನ್ನು ಬ್ರಿಟಿಷ್ ಕಾಲದಲ್ಲಿಯೇ ನಿರ್ಮಿಸಲಾಗಿದ್ದು, ಇಂದಿಗೂ ಗ್ರಾಮದ ಜನರಿಗೆ ಬಾಯಾರಿಕೆಯನ್ನು ತನಿಸುವಲ್ಲಿ ತನ್ನ ಕೊಡುಗೆಯನ್ನು ನೀಡುತ್ತಲೇ ಇದೆ. ಅದರಂತೆ ಗ್ರಾಮದ ಹೊರಭಾಗದಲ್ಲಿ ಮುಖ್ಯ ರಸ್ತೆಗೆ ಹೊಂದಿಕೊಂಡು ಹನುಮಂತ ದೇವರ ದೇವಾಲಯವನ್ನು ಬ್ರಿಟನ್ ರಸ ಜಾರ್ಜ ದೊರೆಯ ಪಟ್ಟಾಭಿಷೇಕದ ಸ್ಮರಣೆಗಾಗಿ ಈ ದೇವಾಲಯವನ್ನು ನಿರ್ಮಿಸಿದನೆಂದು ದೇವಾಲಯದ ಗರ್ಭಗ್ರಹದ ಭಾಗಿಲುವಾಡದ ಪಟ್ಟಿಕೆಯಲ್ಲಿ ಉಲ್ಲೇಖಿತ ಶಾಸನವಿದೆ.

**ಬ್ರಿಟಿಷ್ ಆದೇಶದಲ್ಲಿ ಸಮಾಜಮುಖಿ ಕಾರ್ಯಗಳು :**

ಶಾಸನಗಳಂತೆ ವಸಾಹತುಶಾಹಿ ಬ್ರಿಟಿಷ್ ಕಾಲದಲ್ಲಿ ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಸಂಸ್ಥಾನಿಕರು ಮಾಡಿದ ಸಮಾಜಮುಖಿ ಕಾರ್ಯಗಳನ್ನು ಮೆಚ್ಚಿ ಸಂಸ್ಥಾನಿಕರಿಗೆ ಮೆಚ್ಚುಗೆಯ ಪತ್ರಗಳನ್ನು ನೀಡಿದ ಸಾಕಷ್ಟು ದಾಖಲೆಗಳು ಲಭ್ಯವಾಗಿವೆ. ಬ್ರಿಟಿಷರ ಆಳ್ವಿಕೆಯ ಪ್ರಭಾವದಿಂದಾಗಿ ಜಿಲ್ಲೆಯ ಹಲವಾರು ಕಡೆಗಳಲ್ಲಿ ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಮಂದಿರಗಳು, ಸಾರಿಗೆ ಸಂಪರ್ಕ ವ್ಯವಸ್ಥೆ ಅಭಿವೃದ್ಧಿ ಹೊಂದಿದವು. ಎಂಬುದನ್ನು ಸಾಹಿತ್ತಿಕ ಆಕರಗಳ ಹಿನ್ನೆಲೆಯಲ್ಲಿ ಅವಲೋಕನ ಮಾಡಲಾಗಿದೆ.



ISBN 978-93-5396-971-4

Scanned with OKEN Scanner

**ಶಿಕ್ಷಣ ಕೇಂದ್ರಗಳ ಸ್ಥಾಪನೆ :**

ಬ್ರಿಟಿಷ್ ಆಳ್ವಿಕೆಯ ಪರಿಣಾಮದಿಂದಾಗಿ ಮೈಸೂರು ಸಂಸ್ಥಾನದಲ್ಲಿ ೧೮೮೧ರ ವೇಳೆಗೆ ೨೦೦೦ ಪ್ರಾಥಮಿಕ ಶಾಲೆಗಳು, ಮುಂಬೈ ಕರ್ನಾಟಕದಲ್ಲಿ ೬೫೦ ಪ್ರಾಥಮಿಕ ಶಾಲೆಗಳು ಸ್ಥಾಪನೆಯಾಗಿದ್ದವು ಬಹುತೇಕ ಶಾಲೆಗಳು ಮರಾಠಿ ಶಾಲೆಗಳೇ ಆಗಿದ್ದವು. ಬಾಗಲಕೋಟೆ ಜಿಲ್ಲೆಯಲ್ಲಿಯೂ ಈ ಕಾಲದಲ್ಲಿ ಹಲವಾರು ಪ್ರಾಥಮಿಕ ಶಾಲೆಗಳು ಆರಂಭವಾಗಿದ್ದುಂಟು. ೧೮೮೬ರಲ್ಲಿ ಮುಧೋಳದಲ್ಲಿ ಘೋರ್ಪಡೆ ಸರ್ಕಾರ ಮತ್ತು ಜಮಖಂಡಿಯಲ್ಲಿ ಪಟವರ್ಧನ ಸರ್ಕಾರ ಮರಾಠಿ ಶಿಕ್ಷಣಕ್ಕೆ ಹೆಚ್ಚು ಒಲವನ್ನು ನೀಡಿ ಪ್ರತ್ಯೇಕ ಮರಾಠಿ ಶಾಲೆಗಳನ್ನು ಪ್ರಾರಂಭಿಸಿದರು. ಇಂದಿಗೂ ಜಮಖಂಡಿಯಲ್ಲಿ ಪಿ.ಬಿ.ಹೈಸ್ಕೂಲ್‌ನಲ್ಲಿ ಮರಾಠಿ ಮಾಧ್ಯಮದ ತರಗತಿಗಳು ನಡೆಯುತ್ತವೆ. ಮಾನ್ಯ ಆರ್.ಡಿ.ರಾನಡೆಯವರು ಇದೇ ಹೈಸ್ಕೂಲಿನಲ್ಲಿ ಅಧ್ಯಯನ ಮಾಡಿದ್ದರು. ಕ್ರಿ.ಶ.೧೮೮೨ರ ಕಾಲಾವಧಿಯಲ್ಲಿ ಅವಿಭಜಿತ ವಿಜಯಪುರ ಜಿಲ್ಲೆಯಲ್ಲಿ ಒಟ್ಟು ೧೫೦ ಸರಕಾರಿ ಶಾಲೆಗಳು ಮತ್ತು ೨೫ ಖಾಸಗಿ ಶಾಲೆಗಳು ಆರಂಭವಾಗಿದ್ದವು. ಇಂದಿನ ಬಾಗಲಕೋಟ ಜಿಲ್ಲೆಯಲ್ಲಿ ೯ ಶಾಲೆಗಳು ಇದರಲ್ಲಿ ಸೇರಿವೆ. ಕಲಾದಗಿಯ ಕನ್ನಡ ಶಾಲೆ, ಗಲಗಲಿಯ ಕನ್ನಡ ಶಾಲೆ, ಇಲಕಲ್, ಗುಳೇದಗುಡ್ಡ, ಬಾಗಲಕೋಟೆಯ ಎ.ವಿ.ಸ್ಕೂಲ್, ಹುನಗುಂದ, ಬಾದಾಮಿಯ ಕನ್ನಡ ಶಾಲೆಗಳನ್ನು ಅಂದಿನ ಶಿಕ್ಷಣಾಧಿಕಾರಿಯಾದ ಮಾನ್ಯ ಆರ್.ಎಸ್.ಸವಣೂರ ಅವರು ಡಿ.ಇ.ಇ..ಕಲಾದಗಿಯವರು ಉತ್ತಮ ಶಾಲೆಗಳೆಂದು ಶಿಫಾರಸ್ಸು ಮಾಡಿದ್ದರು. ಉತ್ತಮವಾದ ಶಾಲೆಗಳಲ್ಲಿ ಮಾತ್ರ ಆರನೆಯ ತರಗತಿಯನ್ನು ಕಲಿಯಲು ಅವಕಾಶ ನೀಡಲಾಯಿತು. ಅಲ್ಲದೆ ಬಾಗಲಕೋಟೆ ವಿಭಾಗದ ೬ ಶಾಲೆಗಳನ್ನು ಮಧ್ಯಮ ಪ್ರತಿಯ ಶಾಲೆಗಳೆಂದು ಆಯ್ಕೆ ಮಾಡಲಾಯಿತು. ಅವುಗಳಲ್ಲಿ ಬೀಳಗಿ ತಾಲೂಕಿನ ಬೀಳಗಿಯ ಕನ್ನಡ ಶಾಲೆ, ಹುನಗುಂದ ತಾಲೂಕಿನ ಅಮೀನಗಡ ಮತ್ತು ಕಮತಗಿಯ ಕನ್ನಡ ಶಾಲೆ, ಬಾದಾಮಿ ತಾಲೂಕಿನ ಕೆರೂರು ಕನ್ನಡ ಶಾಲೆ ಮತ್ತು ಬಾಗಲಕೋಟ ತಾಲೂಕಿನ ಶಿರೂರು ಕನ್ನಡ ಶಾಲೆಗಳಾಗಿದ್ದು, ಈ ಶಾಲೆಗಳಲ್ಲಿ ಈ ಶಾಲೆಗಳಲ್ಲಿ ಐದನೆಯ ತರಗತಿಯವರೆಗೆ ಕಲಿಯಲು ಮಾತ್ರ ಅವಕಾಶವಿತ್ತು ಉಳಿದೆಡೆ ಬಿನ್-ಇಯತ್ತೆಯಿಂದ ನಾಲ್ಕನೆಯ ತರಗತಿಯವರೆಗೆ ಕಲಿಸಲಾಗುತ್ತಿತ್ತು. ಮುಲ್ಕಿ ಪರೀಕ್ಷೆಯು [ವೆರ್ನಾಕ್ಯೂಲರ್ ಫೈನಲ್ ಪರೀಕ್ಷೆ] ಪಬ್ಲಿಕ್ ಪರೀಕ್ಷೆಯಾಗಿತ್ತು.[೧೦]

ಮಹರ್ಷಿ ಗಾವಲ ಊರೆಂದು ಖ್ಯಾತವಾಗಿದ್ದ ಬಾಗಲಕೋಟೆ ಜಿಲ್ಲೆಯ ಗಲಗಲಿಯ ಮಾದರಿಯ ಪ್ರಾಥಮಿಕ ಶಾಲೆಯು ೧೮೬೧ ರಲ್ಲಿ ಆರಂಭಗೊಂಡಿದ್ದು; ಈ ಶಾಲೆಗೆ ಶ್ರೀ ರಾಮಚಂದ್ರ ಹೆಬ್ಬಾರ ಅವರು ಎರಡು ಎಕರೆ ಭೂದಾನ ಮಾಡಿದ್ದರು. ಕುಂದರಗಿಯ ಪ್ರಾಥಮಿಕ ಶಾಲೆಯು ೧೮೮೫ರಲ್ಲಿ ಪ್ರಾರಂಭವಾಗಿತ್ತು. ನಾಗೂರಿನ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆಯು ೧೮೮೬ರ ಫೆಬ್ರುವರಿ ೬ ರಂದು ಗ್ರಾಮದ ಹನುಮಂತ ದೇವಾಲಯದಲ್ಲಿ ಆರಂಭವಾಗಿ ೧೯೬೯ರಲ್ಲಿ ಸರಕಾರ ಸಹಾಯಧನದಿಂದ ನಿರ್ಮಾಣಗೊಂಡ ಕಟ್ಟಡಕ್ಕೆ ಸ್ಥಳಾಂತರಗೊಂಡಿತು.

ಜಮಖಂಡಿ ತಾಲೂಕಿನ ರಬಕವಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಸಾಂಗಲಿ ಸಂಸ್ಥಾನಿಕರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವ ಸಂದರ್ಭದಲ್ಲಿ ೧೮೮೫ರಲ್ಲಿ ಆಂಗ್ಲೋ-ವೆರ್ನಾಕ್ಯೂಲರ್ ಶಾಲೆ ಆರಂಭವಾಗಿತ್ತು. ಹುನಗುಂದದಲ್ಲಿ ರಾಘವೇಂದ್ರರಾವ್ ದೇಸಾಯಿ, ಶ್ರೀ.ತಮ್ಮಣ್ಣರಾಯರು ಬಾಗಲಕೋಟೆ, ಮೇಲ್ದಾಪೂರ ರಾಘವೇಂದ್ರ ದೇಶಪಾಂಡೆ, ಶ್ರೀರಂಗಪ್ಪನವರು ಜನಾದ್ರಿ ಮತ್ತು ಶ್ರೀ ಬಸೆಟ್ಟಪ್ಪನವರು ಬಳೂಟಗಿ ಮುಂತಾದವರು ಶ್ರೀಮಂತ ನಾಗರಾಳ ದೊಡ್ಡಪ್ಪನವರ ಹಿರಿತನದಲ್ಲಿ ತಾಲೂಕಾ ಶಿಕ್ಷಣಾಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ ೧೯೧೫ರಲ್ಲಿ ಈ ಭಾಗದ ಮಕ್ಕಳಿಗೆ ಶಿಕ್ಷಣ ನೀಡುವ



ISBN 978-93-5396-971-4

Scanned with OKEN Scanner

ಮುಹದಾಸೆಯಿಂದ ಆಂಗ್ಲೋ-ವೆರ್ನಾಕ್ಯೂಲರ್ ಇಂಗ್ಲೀಷ್ ಶಾಲೆಯನ್ನು ಆರಂಭಿಸಿದ್ದರು.[೧೧] ಹೀಗೆ ಪಾಶ್ಚಾತ್ಯರ ಪ್ರಭಾವದಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಶಿಕ್ಷಣದ ಪ್ರಗತಿ ನಿರಂತರವಾಗಿ ಮುಂದುವರೆಯಿತು.

ಒಟ್ಟಾರೆ ವ್ಯಾಪಾರಕ್ಕೆಂದು ತಕ್ಕಡಿಯನ್ನು ಹಿಡಿದುಕೊಂಡು ಬಂದಿರುವ ಬ್ರಿಟಿಷರು ಭಾರತದಲ್ಲಿ ರಾಜಕೀಯವಾಗಿಯೂ ಭದ್ರವಾದ ನೆಲೆಯನ್ನು ಕಂಡುಕೊಳ್ಳುವುದರೊಂದಿಗೆ ಭಾರತೀಯರಲ್ಲಿದ್ದ ಕೆಲವೊಂದು ಸಾಮಾಜಿಕ, ಧಾರ್ಮಿಕ ಮೌಢ್ಯಗಳನ್ನು ಹೋಗಲಾಡಿಸುವುದರ ಮೂಲಕ ಶೈಕ್ಷಣಿಕವಾಗಿಯೂ ಬಲಗೊಳ್ಳಲು ಪ್ರೇರಕರಾದರು. ಆದರೆ ಅವರ ರಾಜಕೀಯ, ಧಾರ್ಮಿಕ, ಆರ್ಥಿಕ ಹಾಗೂ ಶೈಕ್ಷಣಿಕ ದಬ್ಬಾಳಿಕೆಗಳು ಅತೀಯಾಗಲಾರಂಭಿಸಿದ್ದರಿಂದ ಭಾರತೀಯರು ಅವರ ವಿರುದ್ಧ ಸ್ವಾತಂತ್ರ್ಯ ಹೋರಾಟಕ್ಕಿಳಿದು ಅವರನ್ನು ದೇಶದಿಂದ ಹೊರಹಾಕಿ ಭಾರತಾಂಬೆಯನ್ನು ಆಂಗ್ಲರ ಕಪಿಮುಷ್ಟಿಯಿಂದ ಮುಕ್ತವಾಗಿಸಿದ್ದರೂ ಅವರು ಭಾರತೀಯ ಸಂಸ್ಕೃತಿಗೆ ನೀಡಿದ ಕೊಡುಗೆಗಳು ಇಂದಿಗೂ ನೆನಪಿನಾಳದಲ್ಲಿ ಹುದುಗಿಕೊಂಡಿವೆ. ಅವರ ದಬ್ಬಾಳಿಕೆಯ ಆಡಳಿತದಲ್ಲಿಯೇ ಕೆಲವೊಂದು ಲಾಭಗಳಾಗಿವೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

**ಅಡಿ ಟಿಪ್ಪಣಿಗಳು :**

೧. ಅಂಬಳಿಕೆ ಹಿರಿಯಣ್ಣ (ಸಂ) ; ಕರ್ನಾಟಕ ಗ್ರಾಮ ಚರಿತ್ರೆ ಕೋಶ ಬಾಗಲಕೋಟೆ ಜಿಲ್ಲೆ, ನಂ.೧೨೮
೨. ಕ.ವಿ.ವಿ.ಹಂಪಿ, ಶಾಸನ ಸಂ.ಚಿಫಿ. ಬಾಗಲಕೋಟೆ.ನಂ.೧೭
೩. B.K.No.239 of 1927-28; SII.XV.272; ಕ.ವಿ.ವಿ.ಶಾ.ಸಂ. IX.ಬಾಗಲಕೋಟೆ.ನಂ.೪೭
೪. B.K.No.75 of 1927-28; SII.XV.717; ಕ.ವಿ.ವಿ.ಶಾ.ಸಂ. IX .ಬೀಳಗಿ.ನಂ.೦೮
೫. B.K.No.93 of 1928-29; SII.XV.732; ಕ.ವಿ.ವಿ.ಶಾ.ಸಂ. IX.ಬೀಳಗಿ.ನಂ.೧೭
೬. B.K.No.262 of 1928-29; SII.XV.675; ಕ.ವಿ.ವಿ.ಶಾ.ಸಂ. IX.ಬೀಳಗಿ.ನಂ.೧೫
೭. KRI No.36 of 1944-45; ಕ.ವಿ.ವಿ.ಶಾ.ಸಂ. IX.ಜಮಖಂಡಿ.ನಂ.೨
೮. B.K.No.59 of 1937-38; SII. XX.418;ಕ.ವಿ.ವಿ.ಶಾ.ಸಂ.IX.ಜಮಖಂಡಿ.ನಂ.೧೧
೯. B.K.No.57 of 1928-29; SII. XV.273; ಕ.ವಿ.ವಿ.ಶಾ.ಸಂ.IX.ಹುನಗುಂದ.ನಂ.೧೧೨
೧೦. ಶಿಕ್ಷಣ ಸಂಪದ – ವಿಜಾಪುರ, ಪು.೪೧
೧೧. ಡಾ.ವೀರಬಸವ ಬಲಕುಂದಿ; ಹೊನ್ನಗುಂದ ಚೇತನ–ಪು.೪೧



ISBN 978-93-5396-971-4

V.M.S.R. VASTRAD ARTS & SCIENCE COLLEGE



ISBN 978-93-5396-971-4

Scanned with OKEN Scanner